# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 368 |
| 2 | ಸದಸ್ಯರ ಹೆಸರು | : | ಶ್ರೀ ಪಿ. ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 15-09-2022 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರದ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿರುವ ಸಾರಕ್ಕಿ ಕೆರೆ ಅಭಿವೃದ್ಧಿಗೆ ಕಳೆದ 10 ವರ್ಷಗಳಿಂದ ಸರ್ಕಾರದಿಂದ ಹಾಗೂ ಬಿಬಿಎಂಪಿ ವತಿಯಿಂದ ಬಿಡುಗಡೆಗೊಳಿಸಿರುವ ಮೊತ್ತವೆಷ್ಟು; ಸದರಿ ಅನುದಾನದಲ್ಲಿ ಸಾರಕ್ಕಿ ಕೆರೆ ಅಭಿವೃದ್ಧಿಗೆ ಕೈಗೊಂಡಿರುವ ಕಾಮಗಾರಿಗಳ ವಿವರವನ್ನು ಒದಗಿಸುವುದು; | ಬೆಂಗಳೂರು ನಗರ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿರುವ ಸಾರಕ್ಕಿ ಕೆರೆಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 445 ಎಂಎನ್‌ವೈ 2014, ದಿನಾಂಕ: 06-02-2016 ರ ಆದೇಶದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ. ತದನಂತರ ಸದರಿ ಕೆರೆಯಲ್ಲಿ ಪಾಲಿಕೆ ವತಿಯಿಂದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಸರ್ಕಾರದಿಂದ ಹಾಗೂ ಬಿಬಿಎಂಪಿ ವತಿಯಿಂದ ಬಿಡುಗಡೆಗೊಳಿಸಿರುವ ಅನುದಾನದ ವಿವರ ಈ ಕೆಳಕಂಡಂತಿದೆ. |

| ವಿವರಗಳು | 2016-17 | 2017-18 | 2018-19 | 2019-20 | 2020-21 | 2021-22 |
|---|---|---|---|---|---|---|
| ಸರ್ಕಾರದ ಅನುದಾನ (ರೂ. ಲಕ್ಷಗಳಲ್ಲಿ) | 600.00 | 575.00 | -- | - | - | - |
| ಬಿಬಿಎಂಪಿ ಅನುದಾನ (ರೂ. ಲಕ್ಷಗಳಲ್ಲಿ) | 25.00 | - | - | 500.00 | 500.00 | 100.00 |

**ಸದರಿ ಅನುದಾನದಡಿಯಲ್ಲಿ ಕೈಗೊಂಡಿರುವ / ಕೈಗೊಳ್ಳುತ್ತಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.**

1. ಸಾರಕ್ಕಿ ಕೆರೆಯ ಗಡಿಗಳಿಗೆ ತಂತಿ ಬೇಲಿ ಅಳವಡಿಸುವುದು.
2. ಸಾರಕ್ಕಿ ಕೆರೆಗೆ ಕೊಳಚೆ ನೀರು ಸೇರದಂತೆ ತಿರುವುಗಾಲುವೆ ನಿರ್ಮಾಣ.
3. ಸಿಲ್ಟ್ ಟ್ರಾಪ್ ಮತ್ತು ಒಳಹರಿವು ಕಾಲುವೆಗಳ ನಿರ್ಮಾಣ
4. ಹೊರ ಹರಿವಿಗೆ ಕೋಡಿಗಳ ಮತ್ತು ಫುಟ್‌ಬ್ರಿಡ್ಜ್ ನಿರ್ಮಾಣ
5. ಕೆರೆಯಲ್ಲಿ ಶೇಖರಣೆಯಾಗಿದ್ದ ಹೂಳನ್ನು ಹೊರಸಾಗಿಸುವ ಮತ್ತು ಏರಿ ಭದ್ರಪಡಿಸುವ ಕಾಮಗಾರಿ.
6. ರಿವೆಟ್‌ಮೆಂಟ್ ಮತ್ತು ಟರ್ಫಿಂಗ್ ಕೆಲಸಗಳು.
7. ವೆಟ್‌ಲ್ಯಾಂಡ್ ನಿರ್ಮಾಣ.
8. ಸಾರ್ವಜನಿಕರು ಪ್ರತಿನಿತ್ಯ ವಾಯುವಿಹಾರ ಮಾಡಲು ಪಾದಚಾರಿ ಮಾರ್ಗ ಮತ್ತು ಸೈಕಲ್ ಟ್ರಾಕ್ ನಿರ್ಮಾಣ.
9. ವಾಯು ವಿಹಾರಕ್ಕಾಗಿ ಬರುವ ಸಾರ್ವಜನಿಕರ ಸುರಕ್ಷತೆಗಾಗಿ ನೀರಿನ ಭಾಗಕ್ಕೆ ತಂತಿ ಬೇಲಿ ನಿರ್ಮಾಣ.
10. ಕಾವಲುಗಾರರ ಕೊಠಡಿ ನಿರ್ಮಾಣ.
11. ಕೆರೆಯ ಸುರಕ್ಷತೆಗಾಗಿ ಗೇಟ್ ಅಳವಡಿಸುವುದು.

| | | |
|---|---|---|
| ಆ | ಸಾರಕ್ಕಿ ಕೆರೆ ಆವರಣದಲ್ಲಿ ಕೆರೆ ನೀರು ಶುದ್ಧೀಕರಣ ಘಟಕ (ಲೇಕ್ ವಾಟರ್ ಫಿಲ್ಟರ್ ಯುನಿಟ್) ನಿರ್ವಹಣೆ ಗೊಳಿಸಲಾಗಿದೆಯೇ; ಹಾಗಿದ್ದಲ್ಲಿ, ಇದರ ಸಲುವಾಗಿ ಪಾಲಿಕೆ ಹಾಗೂ ಸರ್ಕಾರದ ವತಿಯಿಂದ ಖರ್ಚಾದ ಮೊತ್ತವೆಷ್ಟು; ಸದರಿ ಘಟಕವು ಪ್ರಸ್ತುತ ಕಾರ್ಯನಿರ್ವಹಿಸುತ್ತಿದೆಯೇ ಅಥವಾ ಸ್ಥಗಿತಗೊಂಡಿರುತ್ತದೆಯೆ; ಸ್ಥಗಿತಗೊಂಡಿದ್ದಲ್ಲಿ, ಕಾರಣ ಸಮೇತ (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಸಾರಕ್ಕಿ ಕೆರೆಯ ಆವರಣದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೊಳಚೆ ನೀರು ಶುದ್ಧೀಕರಣ ಘಟಕವನ್ನು ನಿರ್ಮಾಣ ಮಾಡಲಾಗಿದ್ದು, ಈ ಕಾಮಗಾರಿಗೆ ಪಾಲಿಕೆಯಿಂದ ಯಾವುದೇ ವೆಚ್ಚ ಮಾಡಿರುವುದಿಲ್ಲ.<br><br>ಸಾರಕ್ಕಿ ಕೆರೆಯ ಬಳಿ ಬೆಂಗಳೂರು ಜಲಮಂಡಳಿ ವತಿಯಿಂದ ಅಮೃತ್ ಯೋಜನೆ ಅಡಿಯಲ್ಲಿ 5 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ರೂ.14.50 ಕೋಟಿಗಳ ಮೊತ್ತದಲ್ಲಿ 2019ರಲ್ಲಿ ನಿರ್ಮಿಸಲಾಗಿರುತ್ತದೆ. ಪ್ರಸ್ತುತ 5 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಕೆರೆಗೆ ಹರಿಸಲಾಗುತ್ತಿದೆ. |
| ಇ | ಸಾರಕ್ಕಿ ಕೆರೆ ಅಭಿವೃದ್ಧಿಗಾಗಿ ಪಾಲಿಕೆಯಿಂದ ಪ್ರಸ್ತುತ ಕಾಮಗಾರಿ ನಡೆಸುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ: ಹಾಗಿದ್ದಲ್ಲಿ, ಸದರಿ ಕಾಮಗಾರಿಗೆ ಬಿಡುಗಡೆಗೊಳಿಸಿರುವ ಮೊತ್ತವೆಷ್ಟು; ಹಾಗೂ ಯಾವ ಲೆಕ್ಕಶೀರ್ಷಿಕೆಯಡಿಯಲ್ಲಿ ಬಿಡುಗಡೆ ಗೊಳಿಸಲಾಗಿರುತ್ತದೆ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಸಾರಕ್ಕಿ ಕೆರೆಯ ಅಭಿವೃದ್ಧಿಗೆ ಪಾಲಿಕೆಯ 2020-21ನೇ ಸಾಲಿನ ಪಿ-ಕೋಡ್ ಪಿ-3811 ಲೆಕ್ಕ ಶೀರ್ಷಿಕೆಯಡಿ ರೂ.500.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನದಲ್ಲಿ ಸಾರಕ್ಕಿ ಕೆರೆಯ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.<br><br>2021-22ನೇ ಸಾಲಿನಲ್ಲಿ ಪಿ-ಕೋಡ್ ಪಿ-0020 ಲೆಕ್ಕ ಶೀರ್ಷಿಕೆಯಡಿ ರೂ.100.00 ಲಕ್ಷಗಳು ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ಕಾಮಗಾರಿ ಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ನಅಇ 731 ಎಂಎನ್‌ವೈ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ